

# ಹುಲಿಗಳೊಂದಿಗೆ ಸರಸ

ಹುಲಿ ಎಂದಾಕ್ಷಣ ನಾವು ಬೆಚ್ಚಿ ಬೀಳುತ್ತೇವೆ. ಅದರ ಚೂಪಾದ ಹಲ್ಲುಗಳು, ಕ್ರೂರತ್ವವನ್ನು ಬಿಂಬಿಸುವ ಕಣ್ಣುಗಳು, ಮೈಮೇಲಿನ ಹಳದಿ ಕಪ್ಪು ಬಣ್ಣದ ಪಟ್ಟೆಗಳು.. ಇವುಗಳನ್ನೆಲ್ಲಾ ಮನದಲ್ಲಿ ಕಲ್ಪಿಸಿಕೊಂಡರೆ ಸಾಕು ನಡುಕವೇ ಶುರುವಾಗುತ್ತದೆ.

ಆದರೆ ಬ್ರೆಜಿಲ್ ದೇಶದಲ್ಲಿ ಒಂದು ಕುಟುಂಬ ಒಂದಲ್ಲ, ಎರಡಲ್ಲ 7 ಹುಲಿಗಳ ಜೊತೆಯಲ್ಲಿಯೇ ಜೀವನ ನಡೆಸುತ್ತಿದೆ. ಅರ್ರೈ ಬೊರ್ಜಸ್ ಎಂಬಾತ ಸರ್ಕಸ್ ಕಂಪೆನಿಯಲ್ಲಿ ಹಿಂಸೆಗೊಳಗಾಗುತ್ತಿದ್ದ ಎರಡು ಹುಲಿಗಳನ್ನು ರಕ್ಷಿಸಿದ. ಸಾವೋ ಪೌಲೋ ಹತ್ತಿರ ಮಾರಿಂಗಾ ಎಂಬಲ್ಲಿರುವ ತನ್ನ ಮನೆಗೆ ಅವುಗಳನ್ನು ತಂದಿಟ್ಟುಕೊಂಡು ಥೇಟ್ ಸಾಕು ಪ್ರಾಣಿಗಳಂತೆ ಸಾಕತೊಡಗಿದ. ತನ್ನ ಮನೆ ಹಿತ್ತಿಲಲ್ಲಿಯೇ ಅವುಗಳಿಗೆ ತಕ್ಕಂತೆ ಪರಿಸರ ಧಾಮವನ್ನು ನಿರ್ಮಿಸಿ ಬಲು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾನೆ. ಇಲ್ಲಿ ಹುಲಿಗಳಲ್ಲದೆ 2 ಸಿಂಹಗಳೂ, ಮಂಗ ಹಾಗೂ ಲಿಟ್ಲ್ ಹೆಸರಿನ ಚಿಕ್ಕ ತಳಿಯ ನಾಯಿಯೂ ಇದೆ.

'ನೀವು ಪ್ರಾಣಿಗಳಿಗೆ ಆದರ ಹಾಗೂ ಪ್ರೀತಿಯನ್ನು ತೋರಿಸಿದರೆ ಅವುಗಳು ನಿಮಗೆ ಮರಳಿ ನೀಡುತ್ತವೆ' ಎನ್ನುವುದು ಅರ್ರೈ ಬೊರ್ಜಸ್ ಅಭಿಪ್ರಾಯ. ಈತನ ಮೂರು ಹೆಣ್ಣುಮಕ್ಕಳಲ್ಲಿ ಕಿರಿಯವಳಾದ ನ್ಯಾರಾ (21) ಹುಲಿ ಮರಿಗಳು ದೊಡ್ಡವಾಗುವವರೆಗೆ ಅವುಗಳನ್ನು ತನ್ನೊಂದಿಗೆಯೇ ಮಲಗಿಸಿಕೊಳ್ಳುತ್ತಿದ್ದಳಂತೆ.

'ಹುಲಿಗಳನ್ನು ನಾವು ತುಂಬಾ ಪ್ರೀತಿಯಿಂದ ಸಾಕುತ್ತಿದ್ದೇವೆ. ಇವುಗಳನ್ನು ಯಾರಾದರೂ ನಮ್ಮಿಂದ ದೂರ ಮಾಡಿದರೆ ನಾವೆಲ್ಲಾ ತೀವ್ರ ಖಿನ್ನತೆಗೆ ಒಳಗಾಗುವುದು ಖಂಡಿತ' ಎಂದು ಈಕೆ ಹೇಳುತ್ತಾಳೆ.

ಟಾಮ್ ಹೆಸರಿನ ಹುಲಿಯೊಂದಿಗೆ ಈಜಾಡುವುದೆಂದೆಂದರೆ ಈಕೆಗೆ ಬಲು ಪ್ರೀತಿ. 'ಮೊದ ಮೊದಲು ಹುಲಿಗಳನ್ನು ನೋಡಿ ಭಯವಾಗುತ್ತಿತ್ತು. ಆದರೆ ದಿನವೂ ಅವುಗಳನ್ನು ನೋಡುತ್ತಾ ಅವುಗಳೊಂದಿಗೆ ಊಟ ಮಾಡುತ್ತಾ, ಆಟವಾಡುತ್ತಿದ್ದರಿಂದ ಹೆದರಿಕೆ ಸಂಪೂರ್ಣ ದೂರವಾಗಿದೆ' ಎಂದು ಈತನ ಮತ್ತೊಬ್ಬ ಮಗಳು ಯ್ಯಾರಾ (23) ಹೇಳುತ್ತಾಳೆ.





ಈಕೆ ಹುಲಿಗಳನ್ನು ಎಷ್ಟು ನಂಬಿದ್ದಾಳೆಂದರೆ ತನ್ನ ಎರಡು ವರ್ಷದ ಪುಟ್ಟ ಮಗಳನ್ನೂ ಸಹ ಅವುಗಳ ಮೇಲೆ ಕೂರಿಸಿ ಸವಾರಿ ಮಾಡಿಸುತ್ತಾಳೆ. ಈತ ಹುಲಿಗಳನ್ನು ಸಾಕಲು ಪರವಾನಗಿ ಹೊಂದಿದ್ದರೂ ಸಹ ಬ್ರೆಜಿಲ್ ವನ್ಯಜೀವಿ ಅಧಿಕಾರಿಗಳು, ಈತ ಕಾನೂನು ಬಾಹಿರವಾಗಿ ಹುಲಿಗಳನ್ನು ಸಾಕುತ್ತಾ ಸಾರ್ವಜನಿಕರಿಗೆ ಅಪಾಯ ತರುತ್ತಿದ್ದಾನೆ ಎಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

■ ವಿದ್ಯಾ ವಿ. ಹಾಲಭಾವಿ